# ಇಂಗ್ಲಿಷ್‌ಗೆ ಮಣೆ, ಮಾತೃಭಾಷೆಯ ಅವಗಣನೆ

▪ **ನೆಟ್‌ಲೋಕ** ಹೊಸದಿಲ್ಲಿ

ಭಾರತದಲ್ಲಿ ಹಿಂದಿಯನ್ನು ಹೊರತು ಪಡಿಸಿದರೆ ಹೆಚ್ಚಿನ ಜನ ಮಾತನಾಡುವ ಭಾಷೆ ಇಂಗ್ಲಿಷ್! ಬ್ರಿಟನ್‌ನ ಜನಸಂಖ್ಯೆಗಿಂತ ದುಪ್ಪಟ್ಟು ಸಂಖ್ಯೆಯ ಭಾರತೀಯರು ಇಂಗ್ಲಿಷ್ ಮಾತನಾಡುತ್ತಾರೆ! ಹಾಗೆಯೇ ಅನೇಕ ಕನ್ನಡಿಗರು ಬೇರೆ ಭಾಷೆಯನ್ನು ತಮ್ಮ ಪ್ರಥಮ ಭಾಷೆಯಾಗಿ ಸ್ವೀಕರಿಸಿದ್ದಾರೆ!

ದ್ವಿಭಾಷಿಯತೆ ಮತ್ತು ತ್ರಿಭಾಷಿಯತೆ ಬಗ್ಗೆ ಇತ್ತೀಚೆಗೆ ಬಿಡುಗಡೆ ಮಾಡಲಾಗಿರುವ ಜನಸಂಖ್ಯೆ-2001ರ ಮಾಹಿತಿಯಲ್ಲಿ ಈ ಸತ್ಯ ಬಹಿರಂಗಗೊಂಡಿದೆ. ಜನಗಣತಿ ವೇಳೆ 2.3 ಲಕ್ಷ ಭಾರತೀಯರು ಇಂಗ್ಲಿಷ್‌ನ್ನು ತಮ್ಮ ಪ್ರಥಮ ಭಾಷೆ ಎಂದು ಒಪ್ಪಿಕೊಂಡಿದ್ದರೆ, 8 ಕೋಟಿ 60 ಲಕ್ಷ ಜನ ಇದಕ್ಕೆ ಎರಡನೇ ಸ್ಥಾನ ನೀಡಿದ್ದಾರೆ. ಮೂರು ಕೋಟಿ 90 ಲಕ್ಷ ಜನರಿಗೆ ಇದು ತೃತೀಯ ಭಾಷೆಯಾಗಿದೆ. ಅಲ್ಲಿಗೆ ಇಂಗ್ಲಿಷ್ ಬಲ್ಲವರ ಸಂಖ್ಯೆ ಹನ್ನೆರಡೂವರೆ ಕೋಟಿ ದಾಟಿರುವುದು ಸ್ಪಷ್ಟವಾಗುತ್ತದೆ.

ಹಿಂದಿ ಮಾತನಾಡುವ ಒಟ್ಟು 55 ಕೋಟಿ 14 ಲಕ್ಷ ಭಾರತೀಯರ ಪೈಕಿ 42 ಕೋಟಿ 20 ಲಕ್ಷ ಜನರಿಗೆ ಹಿಂದಿ ಪ್ರಥಮ ಭಾಷೆಯಾಗಿದೆ. 9ಕೋಟಿ 80 ಲಕ್ಷ ಜನರಿಗೆ ಇದು ದ್ವಿತೀಯ ಭಾಷೆಯಾಗಿದ್ದರೆ, ಮೂರು ಕೋಟಿ 12 ಲಕ್ಷ ಜನರಿಗೆ ತೃತೀಯ ಭಾಷೆಯಾಗಿದೆ.

ಪ್ರಥಮ ಭಾಷೆಯಾಗಿ ಭಾರತದ ಎರಡನೇ ಅತಿ ದೊಡ್ಡ ಭಾಷೆ ಎನಿಸಿಕೊಂಡಿದ್ದ ಬಂಗಾಳಿ ಈಗ ಇಂಗ್ಲಿಷ್‌ಗೆ ತನ್ನ ಸ್ಥಾನ ಬಿಟ್ಟುಕೊಟ್ಟು, ಮೂರನೇ ಸ್ಥಾನಕ್ಕೆ ಇಳಿದಿದೆ. ಭಾಷಾ ವೈವಿಧ್ಯತೆಯ ಪರಿಣಾಮವಾಗಿ ಕರ್ನಾಟಕದ ಅನೇಕ ಜನ ಇತರ ಭಾಷೆಯನ್ನು ಪ್ರಥಮ ಭಾಷೆಯಾಗಿ ಸ್ವೀಕರಿಸಿ, ಕನ್ನಡಕ್ಕೆ ಎರಡನೇ ಸ್ಥಾನ ನೀಡಿದ್ದಾರೆ. ಒಟ್ಟು ಕನ್ನಡ ಮಾತನಾಡುವವರ ಒಟ್ಟು ಸಂಖ್ಯೆ ಐದು ಕೋಟಿ ಎಂಟು ಲಕ್ಷ ಆಗಿದ್ದರೆ, ಇವರಲ್ಲಿ ಮೂರು ಕೋಟಿ 70 ಲಕ್ಷ ಜನರಿಗೆ ಮಾತ್ರ ಕನ್ನಡ ಪ್ರಥಮ ಭಾಷೆಯಾಗಿದೆ. ಆದರೆ ಒಟ್ಟು ಸಂಖ್ಯೆಯಲ್ಲಿ ಗುಜರಾತ್ ಭಾಷೆಯನ್ನು ಕನ್ನಡ ಹಿಂದಿಕ್ಕಿದೆ.

- 25.5 ಕೋಟಿ ಭಾರತೀಯರಿಗೆ ಎರಡು ಭಾಷೆಗಳು ಗೊತ್ತು.
- 8.75 ಕೋಟಿ ಭಾರತೀಯರಿಗೆ ಮೂರು ಭಾಷೆಗಳು ಗೊತ್ತು.
- ಸಮೀಕ್ಷೆಯಲ್ಲಿ ಗರಿಷ್ಠ ಮೂರು ಭಾಷೆಗಳನ್ನು ಮಾತ್ರ ಸೂಚಿಸಲು ತಿಳಿಸಲಾಗಿತ್ತು.
- ಒಂದಕ್ಕಿಂತ ಹೆಚ್ಚು ಭಾಷೆ ಬಲ್ಲವರಲ್ಲಿ ನಗರ ಪ್ರದೇಶದವರೇ ಹೆಚ್ಚು, ಆದರೂ 13.67 ಕೋಟಿ ಗ್ರಾಮೀಣರಿಗೆ ಕನಿಷ್ಠ ಎರಡು ಭಾಷೆಗಳು ತಿಳಿದಿವೆ.

## ಪ್ರಮುಖ ಭಾಷೆಗಳನ್ನು ಬಳಸುವವರ ಸಂಖ್ಯೆ

| ಭಾಷೆ | ಸಂಖ್ಯೆ |
|---|---|
| ಹಿಂದಿ | 55,14,00,000 |
| ಇಂಗ್ಲಿಷ್ | 12,50,00,000 |
| ಬಂಗಾಳಿ | 9,11,00,000 |
| ತೆಲುಗು | 8,50,00,000 |
| ಮರಾಠಿ | 8,42,00,000 |
| ತಮಿಳು | 6,67,00,000 |
| ಉರ್ದು | 5,90,00,000 |
| ಕನ್ನಡ | 5,08,00,000 |
| ಗುಜರಾತಿ | 5,03,00,000 |
| ಒರಿಯಾ | 3,66,00,000 |
| ಮಲಯಾಳಂ | 3,38,00,000 |
| ಪಂಜಾಬಿ | 3,14,00,000 |
| ಅಸ್ಸಾಮಿ | 1,89,00,000 |